ಎಮ್.ವಿ.ಸಿ. ನಂ.143/2023

ಪಿ.ಡಬ್ಲ್ಯೂ1

ದಿನಾಂಕಃ 03-09-2024.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರವಾಗಿ ವಕೀಲರಿಂದಃ**

ಅಪಘಾತದ ದಿನದಂದು ನಾನು ಮತ್ತು ಇನ್ನೊಬ್ಬ ಖಾಜಾ ಮೈನುದ್ದಿನ್ ಇಬ್ಬರು ಸೇರಿ ಮೋಟಾರ ಸೈಕಲ ಮೇಲೆ ಯಾದಗಿರಿಯಿಂದ ನೈಕಲ್ ಕಡೆಗೆ ಬರುತ್ತಿದ್ದೇವು. ನಾವು ಬರುತ್ತಿದ್ದ ರಸ್ತೆ ಯಾದಗಿರಿ- ಶಹಾಪೂರ ಮುಖ್ಯ ರಸ್ತೆಯಾಗಿರುತ್ತದೆ. ನಾವಿಬ್ಬರು ನೈಕಲ ಗೆ ಹೋಗುತ್ತಿದ್ದೇವು. ಸದರಿ ಮೋಟಾರ ಸೈಕಲ ನ್ನು ನಾನೇ ಚಲಾಯಿಸುತ್ತಿದ್ದೆ. ಮೋಟಾರ ಸೈಕಲ ಚಲಾಯಿಸಲು ನನ್ನ ಬಳಿ DL ಇರುತ್ತದೆ. ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ.

2. ಅಪಘಾತದ ಕಾಲಕ್ಕೆ ನಾನು ಮೋಟಾರ ಸೈಕಲನ್ನು ರಸ್ತೆಯ ಮಧ್ಯದಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ಅಪಘಾತ ಸ್ಥಳ ರಸ್ತೆಯ ಮಧ್ಯ ಭಾಗ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ಯಾದಗಿರಿಯಿಂದ ಬಂದು ನೈಕಲ ಗೆ ಹೊಗಲು ರಸ್ತೆಯ ಎಡಭಾಗಕ್ಕೆ ತಿರುಗಿಸಿಕೊಂಡು ಹೋಗಬೇಕಾಗಿತ್ತು ಎಂದರೆ ಸರಿ. ಸದರಿ ಅಪಘಾತದ ಕಾಲಕ್ಕೆ ಒಂದು ಟಿಪ್ಪರ ಲಾರಿಯೂ ಸಹ ರಸ್ತೆಯ ಎಡಭಾಗಕ್ಕೆ ಹೋಗುತ್ತಿತ್ತು ಎಂದರೆ ಸರಿಯಲ್ಲ. ನಾನು ಅಂದಾಜು 6-7 ವರ್ಷಗಳಿಂದ ಮೋಟಾರ ಸೈಕಲ ಚಲಾಯಿಸುತ್ತಿದ್ದೇನೆ. ಸದರಿ ಅಪಘತಾವು ಶಹಾಪೂರದಿಂದ ಯಾದಗಿರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಆಗಿರುತ್ತದೆ ಎಂದೆರ ಸರಿಯಲ್ಲ. ಸದರಿ ಅಪಘತಾತವು ಶಹಾಪೂರದಿಂದ ಯಾದಗಿರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಆಗಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದಿದರಿ ಅಪಘಾತವು ಟಿಪ್ಪರ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದಲೇ ಅಗಿರುಎತ್ತದದೆ ಎಂದರೆ ಸರಿಯಲ್ಲ. 3.

ಅಪಘಾತದ ನಂತರ ನನ್ನನ್ನು ಯಾದಗಿರಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ನಾವು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾಗ ಅಂದಾಜು ಸಮಯ ರಾತ್ರಿ 9.30 ಗಂಟೆ ಆಗಿತ್ತು. ಅಪಘಾತವಾದ ನಂತರ ನನಗೆ 10-15 ನಿಮೀಷರವರೆಗೆ ಪ್ರಜ್ಞೆ ಇದಿತ್ತು. ಆ ನಂತರ ನನಗೆ ಪ್ರಜ್ಞೆ ತಪ್ಪಿತ್ತು. ನಮ್ಮನ್ನು ಸರ್ಕಾರಿ ಆಸ್ಪತ್ರೆ ಯಾದಗಿರಿಗೆ ಕರೆದುಕೊಂಡು ಹೋಗಲು 10-15 ಜನ ಬಂದಿದ್ದರು ಎಂದು ನನಗೆ ಗೊತ್ತಾಗಿರುತ್ತದೆ. ಅವರೆಲ್ಲರು ನನಗೆ ಮತ್ತು ಖಾಜಾ ಮೈನುದ್ದಿನನ ಸಂಬಂಧಿಕರು ಆಗಿದ್ದರು. ಅಪಘಾತವಾದ ಮಾರನೇ ದಿನ ಪೊಲೀಸರು ನನ್ನ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ. ಸದರಿ ಅಪಘಾತದ ಬಗ್ಗೆ ಯೂದಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಮತ್ತು ಪೊಲಿಸರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದಲೇ ಅಗಿರುತ್ತದೆ ಎಂದರೆ ಸರಿಯಲ್ಲ. ನಾವು ಮತ್ತು ಪೊಲಿಸರು ಸೇರಿ ಟಿಪ್ಪರ ಚಾಲಕನ ವಿರುದ್ದ ಸುಳ್ಳು ಪ್ರಕರಣ ದಾಖಲಿಲಾಗಿದೆ ಎಂದರೆ ಸರಿಯಲ್ಲ. ನಾವು ಸರ್ಕಾರಿ ಆಸ್ಪತ್ರೆ ಯಾದಗಿರಿ, united hospital Kalaburgi ಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಕೈ ಮತ್ತು ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ನನಗೆ ಕೈ ಮತ್ತು ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ಎಂದು ಹೇಳಿ ಸು ಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನಗೆ ಯಾವುದೆ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಮೇಡಿಕಲ್ ಬಿಲ್ಲುಗಳನ್ನು ಮತ್ತು ಇತರ ದಾಖಲೆಗಳನ್ನು ಸೃಷ್ಟಿ ಮಾಡಿ ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ಈಗಲೂ ಸಹ ಅದೇ ಕೇಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈಗಲೂ ಸಹ ನಾನು ಅದೇ ಕೇಲಸ ಮಾಡಿ ಜೇವನ ನಿರ್ವಹಣೆ ಮಾಡುತ್ತಿದ್ದೇನೆಎಂದರ ಸರರಿ. ಅಪಘಾತದ ಕಾಲಕ್ಕೆ ನನಗೆ 23 ವರ್ಷ ಆಗಿತ್ತು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.